# ನವಿಲುಗನ್ನಡಿ

ಈ ಸಂಚಿಕೆ ವೈವಿಧ್ಯಮಯ ಕತೆ, ಲೇಖನಗಳಿಂದ ಮನರಂಜಿಸಿತು. ಮುಖಪುಟ ವಿಶಿಷ್ಟವಾಗಿತ್ತು. ಶಾರದಾ ವಿ. ಮೂರ್ತಿಯವರ 'ಅನುಬಂಧ' ಎಂ.ಎನ್. ರಾಣೀ ರತ್ನಾರಾವ್ ಅವರ 'ವ್ಯತ್ಯಾಸ' ಕತೆಗಳು ಮಾನವೀಯ ಸಂಬಂಧಗಳ ಎಳೆಗಳಿಂದಾಗಿ ಗಮನ ಸೆಳೆದವು.

**ಆರ್. ಮಣಿಹಾಡ್ಯ, ಮೈಸೂರು**

ಎಸ್. ದಿವಾಕರ್ ಮತ್ತು ಎಚ್.ಎಸ್. ರಾಘವೇಂದ್ರರಾವ್ ನಡುವಿನ ಸಂವಾದ– 'ಊರ ಆಚೆ–ಊರ ಒಳಗೆ' ವಿಶಿಷ್ಟ ಬರಹ. ಕೆಲವು ಬಿಕ್ಕಟ್ಟುಗಳನ್ನು, ಸಾಹಿತ್ಯದ ಹೊಸ ಹೊಳಹುಗಳನ್ನೂ ಇಂದಿನ ಸಂದರ್ಭದಲ್ಲಿ ನಿಂತು ಚರ್ಚಿಸಲಾಗಿದೆ. ನಾವು ಗುಂಪುಗಳನ್ನು ಸೃಷ್ಟಿಸುತ್ತಿದ್ದೇವೆಯೇ ಹೊರತು ಸಾಹಿತ್ಯದ ಓದುಗರನ್ನಲ್ಲ ಎಂಬ ಎಚ್‌ಎಸ್‌ಆರ್ ಅವರ ಮಾತು ಬಹಳ ನಿಜ.

**ಎಂ.ಎಸ್. ರಘುನಾಥ್, ಬೆಂಗಳೂರು**


'ಮಾತು–ಕತೆ' ಚಿಂತನೆಗೆ ಹಚ್ಚುವಂತಿದೆ. ಈ ಚರ್ಚೆ ಇಂದಿನ ಪರಿಸ್ಥಿತಿಯ ಕನ್ನಡಿಯೂ, ಸವೆದು ಹೋದ ಹಾದಿಯ ಅವಲೋಕನವೂ ಆಗಿದೆ.

**ಜನಾರ್ದನ, ಚನ್ನಗಿರಿ/ಸುಂದರ್, ಬೆಂಗಳೂರು**

ಬೇಡರ ಕಣ್ಣಪ್ಪ, ಭೋಜರಾಜ, ಭರತ, ದುರ್ಯೋಧನ ಮುಂತಾದ ಪಾತ್ರಗಳಲ್ಲಿ ಮಿಂಚಿದ ಎಲ್. ನಾಗಪ್ಪನವರನ್ನು ಪರಿಚಯಿಸಿದ 'ರಂಗವಿಹಂಗಮ' (ಎನ್. ಜಗನ್ನಾಥ ಪ್ರಕಾಶ್) ಉತ್ತಮವಾಗಿತ್ತು.

**ಪಿ. ಜಯವಂತ ಪೈ, ಕುಂದಾಪುರ**

ಯಾವುದೇ ಕ್ಲೇಷೆ–ಕ್ಲಿಷ್ಟತೆಗಳಿಗೆ ಮನಗೊಡದೆ ಪಾಲಿಗೆ ಬಂದ ಬದುಕಿನ ಹಾಲನ್ನೇ ಕುದಿಸಿ–ಕೆನೆಗಟ್ಟಿಸಿ ಉಣ್ಣುತ್ತ,




ಸುತ್ತಲ ಹತ್ತು ಜನರ ನಡುವೆ ತನ್ನ ಬದುಕನ್ನು ಸಾಗಿಸುವ ಘನವಾದ ವ್ಯಕ್ತಿತ್ವಗಳ ಸುಂದರ ಕತೆ 'ಒಂಟಿಯಾನ' (ಬಿ. ಮಂಜುನಾಥ ಕಾಮತ್) ತುಂಬಾ ಇಷ್ಟವಾಯಿತು.

**ಗುರುಪ್ರಸಾದ್, ಆಲೂರು**

ಶಾರದಾ ವಿ. ಮೂರ್ತಿ ಅವರ 'ಅನುಬಂಧ' ಕತೆಯಲ್ಲಿನ ತರಕಾರಿ ಮಾರುವವನ ಸರಳ, ನಿಷ್ಕಪಟ, ಶಾಂತ ಮನೋಭಾವ ಮನಗೆದ್ದಿತು. ಮಧುರಾ ಕರ್ಣಮ್ ಅವರ 'ಪರಂಪರಾನುಗತ' ಹಾಗೂ ರೇಖಾ ಕಾಖಂಡಕಿ ಅವರ 'ಹೀಗಿದ್ದಳೊಬ್ಬ ಅಚ್ಚಕ್ಕ' ಕತೆಗಳು ವಾಸ್ತವಕ್ಕೆ ಹತ್ತಿರವಾಗಿವೆ.

**ಕುಮಾರಪ್ಪ, ಲಿಂಗಸೂಗೂರು**

ಹೊಸತನದ ಕತೆ 'ಗಿಳಿಯು ಪಂಜರದೊಳಿಲ್ಲ' (ರಾಜೀವ ನಾರಾಯಣ ನಾಯಕ) ಮನಸ್ಸಿಗೆ ಮುದ ನೀಡಿತು. ಅನುವಾದಿತ ಕತೆಗಳು ಮತ್ತು ಪ್ರಬಂಧಗಳು ಚೆನ್ನಾಗಿವೆ.

**ಎನ್. ಮಹಾದೇವ, ಚೆನ್ನೈ**

ಜಿ.ಕೆ. ರವೀಂದ್ರಕುಮಾರ್ ಅವರ 'ಇದು ಚಿತ್ರಗೀತೆಗಳ ಸಮಯ' ಪ್ರಬಂಧ ತಿಳಿ ಹಾಸ್ಯದೊಂದಿಗೆ ಚಿತ್ರಗೀತೆಗಳು ಜೀವನದ ಹಲವು ಘಟನೆಗಳೊಂದಿಗೆ ಹೇಗೆ ಬೆರೆತಿವೆ ಎಂಬುದನ್ನು ಸೊಗಸಾಗಿ ನಿರೂಪಿಸಿದೆ.

**ಮೀನಾಕ್ಷಿ ಕೆ., ಬೈಲಹೊಂಗಲ**